ರೇಷ್ಮೆ ಇಲಾಖೆಯಲ್ಲಿ ಶೈತ್ಯಾಗಾರಗಳು

೧೦೫(೩೪) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧. ರಾಜ್ಯದಲ್ಲಿ ಆರಂಭಿಸಲುದ್ದೇಶಿಸಿದ ರೇಷ್ಮೆ ಶೈತ್ಯಾಗಾರಗಳೆಷ್ಟು ಹಾಗೂ ಯಾವ ಸ್ಥಳಗಳಲ್ಲಿ ಆರಂಬಿಸಲಾಗುವುದು?

೨. ಇದಕ್ಕಾಗಿ ಮೀಸಲಿರಿಸಿರುವ ಹಣವೆಷ್ಟು? ಇದಕ್ಕೆ ವಿಶ್ವಬ್ಯಾಂಕ್ ನೆರವನ್ನು ಪಡೆಯಲಾಗಿದೆಯೆ ?

೩. ಈ ಶೈತ್ಯಾಗಾರಗಳನ್ನು ಸ್ಥಾಪಿಸಲು ಖಾಸಗಿ ಟೆಂಡರ್‌ಗಳನ್ನು ಆಂಗೀಕರಿಸಲಾಗಿದೆಯೆ ?

೪. ಈ ಶೈತ್ಯಾಗಾರಗಳ ನಿರ್ಮಾಣ ಈಗ ಯಾವ ಹಂತದಲ್ಲಿದೆ ?

ಶ್ರೀ ಕೆ. ಎಂ. ಮಾನಿಯಪ್ಪ (ರೇಷ್ಮೆ ಸಚಿವರು).—

೧. ೧೩ (ಶೈತ್ಯಾಗಾರಗಳು) ಶೈತ್ಯಾಗಾರಗಳನ್ನು ನಿರ್ಮಿಸಲು ಉದ್ದೇಶಿಸಿರುವ ಸ್ಥಳಗಳು ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಸ್ಥಳ	ತಾಲ್ಲೂಕು	ಜಿಲ್ಲೆ
೧.	ಬಳ್ಳಾರಿ	ಬಳ್ಳಾರಿ	ಬಳ್ಳಾರಿ
೨.	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ
೩.	ಚಾಮರಾಜನಗರ	ಚಾಮರಾಜನಗರ	ಮೈಸೂರು
೪.	ಚನ್ನಪಟ್ಟಣ	ಚನ್ನಪಟ್ಟಣ	ಬೆಂಗಳೂರು (ಗ್ರಾಮಾಂತರ)
೫.	ಮಂಡ್ಯ	ಮಂಡ್ಯ	ಮಂಡ್ಯ
೬.	ಬೀದರ್	ಬೀದರ್	ಬೀದರ್
೭.	ಚದಲಾಪುರ	ಚಿಕ್ಕಬಳ್ಳಾಪುರ	ಕೋಲಾರ
೮.	ಹಾಸನ	ಹಾಸನ	ಹಾಸನ
೯.	ಸೂಲಿಬೆಲೆ	ಹೊಸಕೋಟೆ	ಬೆಂಗಳೂರು (ಗ್ರಾಮಾಂತರ)
೧೦.	ತುಮಕೂರು	ತುಮಕೂರು	ತುಮಕೂರು
೧೧.	ರಾಯಪುರ	ಹುಬ್ಬಳ್ಳಿ	ಧಾರವಾಡ
೧೨.	ತಲಘಟಪ್ಪುರ	ಬೆಂಗಳೂರು ದಕ್ಷಿಣ	ಬೆಂಗಳೂರು (ನಗರ)
೧೩.	ತಾಂಡವಪುರ	ನಂಜನಗೂಡು	ಮೈಸೂರು

೨. ಯೋಜನೆಯಲ್ಲಿ ೯೫೦.೩೨ ಲಕ್ಷ ರೂಪಾಯಿಗಳನ್ನು ನಿಯೋಜಿಸಲಾಗಿದೆ.

೩. ಹೌದು.

(ಗ್ಲೋಬಲ್ ಟೆಂಡರ್‌ನ್ನು ಆಂತರರಾಷ್ಟ್ರೀಯ ಸ್ಪರ್ಧಾತ್ಮಕ ಟೆಂಡರ್‌ನ್ನು ಕರೆಯಲಾಗಿತ್ತು)

೪. ಇನ್ನೂ ಕೆಲಸ ಪ್ರಾರಂಬವಾಗಿರುವುದಿಲ್ಲ. ಆದಾಗ್ಯೂ ಜಪಾನಿನ ಟೋಕಿಯೋದ ಮೆಸರ್ಸ್ ಮಾರು ಬೆನಿ ನಿಗಮವು ರೇಷ್ಮೆ ಇಲಾಖೆಯೊಂದಿಗೆ ಶೈತ್ಯಾಗಾರಗಳ ಸರಬರಾಜು ; ನಿರ್ವಹಣೆ ; ನಿರ್ಮಾಣ ಸ್ಥಾಪನೆಗಾಗಿ ಕರಾರು ಮಾಡಿಕೊಂಡಿದೆ.